ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 115-2024

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ -01

**ಸಾಕ್ಷಿಗೆ ದಿಃ 23.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರಃ T.G.T ವಕೀಲರಿಂದಃ**

ದಿನಾಂಕ 17.10.2023 ರಂದು ನನ್ನ ಕರ್ತವ್ಯದ ಅವದಿ ಬೆಳಿಗ್ಗೆ 8 ರಿಂದ ಎಸ್.ಹೆಚ್.ಓ ಆಗಿ ರಾತ್ರಿ 8.30 ಗಂಟೆಯವರೆಗೆ ಇರುತ್ತದೆ. ಆ ದಿನ ಠಾಣಾಧಿಕಾರಿ ನಾನೇ ಆಗಿರುತ್ತೇನೆ. ಯಾರು ಯಾರು ಯಾವ ಕೆಲಸಕ್ಕೆ ನೇಮಕಗೊಂಡಿರುತ್ತಾರೆಂದು ನಮ್ಮ ಠಾಣಾ ಡೈರಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಆ ದಿನ ಚಾಸಾ 1 ಮತ್ತು 4 ರಿಂದ 6 ಗಸ್ತು ಕರ್ತವ್ಯಕ್ಕೆ ನೇಮಕವಾದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಡೈರಿಯಲ್ಲಿ ಗಸ್ತು ಕರ್ತವ್ಯಕ್ಕೆ ನೇಮಕವಾದ ಬಗ್ಗೆ ನಾನೇ ಬರೆದಿರುತ್ತೇನೆಂದು ಹೇಳುತ್ತಾರೆ. ಸದರಿ ದಾಖಲೆಯನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ.

ಚಾಸಾ 5 ಅವರು ದೂರನ್ನು ತಗೆದುಕೊಂಡು ದ್ವಿ ಚಕ್ರವಾಹನದಲ್ಲಿ 5.45 ಗಂಟೆಗೆ ಬಂದಿರುತ್ತಾರೆ. ಚಾಸಾ 5 ಅವರು ಎಸ್.ಬಿ ಕರ್ತವ್ಯಕ್ಕೆ ನೇಮಕ ಮಾಡಲಾಗಿತ್ತು. ಅವರು ಚಾಸಾ 1 ಅವರ ವಾಹನದಲ್ಲಿ ಗಸ್ತಿಗೆ ಹೋಗಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು Electronic ವಸ್ತುಗಳನ್ನು ಸ್ಥಳಕ್ಕೆ ತಗೆದುಕೊಂಡು ಹೋಗಿರುತ್ತೇನೆ. ನಾನು ನನ್ನ ಸ್ವಂತ ವಾಹನದಲ್ಲಿ ಹೋಗಿರುತ್ತೇನೆಂದು ಹೇಳುತ್ತಾರೆ. ನಾನು 15 ರಿಂದ 20 ನಿಮಿಷ ತಗೆದುಕೊಂಡು ಎಫ್.ಐ.ಆರ್ ಅನ್ನು ಮಾಡಿರುತ್ತೇನೆ. 6.10 ಗಂಟೆಯವರೆಗೆ ಎಫ್.ಐ.ಆರ್ ಮಾಡಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್.ಐ.ಆರ್ ಹೊರತು ಪಡಿಸಿ ಪಂಚರನ್ನು ಕರೆಯಿಸುವ ಕುರಿತು ಒಂದು ಪತ್ರವನ್ನು ತಯಾರು ಮಾಡಿರುತ್ತೇನೆಂದು ಹೇಳುತ್ತಾರೆ. ಆ ದಿನ

ನಾನು ಠಾಣೆಯನ್ನು 6.15 ಗಂಟೆಗೆ ಬಿಟ್ಟಿರುತ್ತೇನೆ. ನಾನು ಅಮೃತೂರನಿಂದ ಮಾರ್ಕೋನಹಹಳ್ಳಿ, ಹೇಮಾವತಿ ಕ್ರಾಸ ಮೂಲಕ ಸ್ಥಳಕ್ಕೆ ಹೋಗಿರುತ್ತೇನೆಂದು ಹೇಳುತ್ತಾರೆ. ಅಮೃತೂರನಿಂದ ಯಡಿಯೂರು 12 ಕೀ ಮೀ ದೂರದಲ್ಲಿದೆ. ನಾನು ಉಪ ತಹಸಿಲ್ದಾರ ಅವರನ್ನು ಬೇಟಿ ಮಾಡಿ ನಂತರ ಸ್ಥಳಕ್ಕೆ ಹೋಗಿರುತ್ತೇನೆಂದು ಹೇಳುತ್ತಾರೆ. ನಾನು ಉಪ ತಹಸಿಲ್ದಾರ ಅವರನ್ನು ಬಸ್ ನಿಲ್ದಾಣದಲ್ಲಿ ಬೇಟಿ ಮಾಡಿರುತ್ತೇನೆ ಅವರಿಗೆ ಫೋನ್ ಮುಕಾಂತರ ವಿಚಾರ ತಿಳಿಸಿದ್ದೇ ಎಂದು ಹೇಳುತ್ತಾರೆ. ಈ ವಿಚಾರವನ್ನು ಮಹಜರನಲ್ಲಿ ನಮೂದು ಮಾಡಿಲ್ಲವೆಂದರೆ ಸರಿ.

ನಾನು ಉಪ ತಹಸಿಲ್ದಾರ ಅವರನ್ನು ಬಸ್ ನಿಲ್ದಾಣದಲ್ಲಿ ಬೇಟಿ ಮಾಡಿದಾಗ 6.25 ಆಗಿತ್ತು ಎಂದು ಹೇಳುತ್ತಾರೆ. ಆ ಸಮಯದಲ್ಲಿ ಉಪ ತಹಸಿಲ್ದಾರ ಮಾತ್ರ ಇದ್ದರು. ಘಟನೆ ಆಗಿದೆ ಎಂದು ಸ್ಥಳಕ್ಕೆ ನಾನು ಮತ್ತು ತನಿಖಾಧಿಕಾರಿಯ ಸಹಾಯಕ ಮಂಜುನಾಥ ಅವರು ಒಂದೇ ವಾಹನದಲ್ಲಿ ಸ್ಥಳಕ್ಕೆ ಹೋಗಿದ್ದು ಅಷ್ಟರಲ್ಲಿ ಪಂಚರು ಸಹ ಅಲ್ಲಿಗೆ ಬಂದಿರುತ್ತಾರೆಂದು ಹೇಳುತ್ತಾರೆ. ಘಟನೆ ಆಗಿದೆ ಎನ್ನುವ ಸ್ಥಳದಲ್ಲಿ ಎಷ್ಟು ಜನರು ಇದ್ದರು ಎಂರದೆ ಸಾಕ್ಷಿ 5 ಜನ ಇದ್ದರು ಎಂದು ಹೇಳುತ್ತಾರೆ.

ನಾವು ಹೋದಾಗ ಪೋಲಿಸ ಜೀಪ್ ಇರಲಿಲ್ಲ. ನಾವು ಸ್ಥಳಕ್ಕೆ ಹೋದಾಗ ಡಿ.ವೈಎಸ್.ಪಿ ಇರಲಿಲ್ಲ. ಅವರನ್ನು ಮತ್ತು ಜೀಪ ಚಾಲಕನ್ನು ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ. ನನ್ನ ತನಿಖಾ ಸಮಯದಲ್ಲಿ ಡಿ.ವೈಎಸ್.ಪಿ ಮತ್ತು ಜೀಪ ಚಾಲಕನ್ನು ವಿಚಾರಣೆ ಮಾಡಿರುವುದಿಲ್ಲ. ದೂರುದಾರರು ಹೇಳಿದ ಮೇರೆಗೆ ಮಹಜರನ್ನು ಡಿ.ವೈಎಸ್.ಪಿ ಸ್ಥಳಕ್ಕೆ ಬಂದ ಬಗ್ಗೆ ಬರೆದಿರುತ್ತೇನೆ. ಸದರಿ ವಿಚಾರವನ್ನು ಮಹಜರನಲ್ಲಿ ನಮೂದು ಮಾಡಿಲ್ಲವೆಂದರೆ ಸರಿ.

ನಾನು ಸ್ಥಳಕ್ಕೆ ಹೋದ ಬಳಿಕ ಪಂಚರ ಸ್ಥಳಕ್ಕೆ ಬಂದಿರುತ್ತಾರೆ. ಅವರು ಬಂದ ಬಳಿಕ ನಾನು ನೋಟಿಸ್ ನೀಡಿರುತ್ತೇನೆ. ನಾನು ಮತ್ತು ಅವರು ಒಂದೆ ಸಮಯಕ್ಕೆ ಹೋಗಿರುತ್ತೇವೆ.

ನೋಟಿಸ್ ನಲ್ಲಿ ಸಮಯ ನಮೂದು ಇರುವುದಿಲ್ಲವೆಂದರೆ ಸರಿ. ಸಾಕ್ಷಿ ಮುಂದುವರೆದು ಸಮಯ ನಮೂದು ಮಾಡುವುದಿಲ್ಲವೆಂದು ಹೇಳುತ್ತಾರೆ. ಮಹಜರನ್ನು ಮನೆಯ ಒಳಗೆ ಮಾಡಿದ್ದೀರಾ ಅಥವಾ ಹೊರಗಡೆ ಮಾಡಿದ್ದೀರಾ ಎಂದರೆ ಸಾಕ್ಷಿ ಮನೆಯ ಒಳಗೆಡ ನೋಡಿಕೊಂಡು ಬಂದು ಹೊರಗಡೆ ಟೈಪ್ ಮಾಡಿರುತ್ತೇವೆಂದು ಹೇಳುತ್ತಾರೆ. ಮನೆಯ ಒಳಗೆ ಯಾವುದೇ ಮಹಜರ ಮಾಡಿಲ್ಲವೆಂದರೆ ಸರಿಯಲ್ಲ.

ಮಹಜರನಲ್ಲಿ ಮನೆಯ ಒಳಗಿನ ಚಕ್ಕುಬಂದಿ ಬರೆದಿಲ್ಲ. ಮಹಜರ ಸಮಯದಲ್ಲಿ ಸುಮಾರು ಜನ ಸ್ಥಳೀಯರು ಸೇರಿದ್ದು ಎಷ್ಟು ಜನವೆಂದು ಗೊತ್ತಿಲ್ಲ. ಸ್ಥಳೀಯರನ್ನು ಸಾಕ್ಷಿದಾರರನ್ನಾಗಿ ಅಥವಾ ಪಂಚರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಸರ್ಕಾರಿ ಅಧಿಕಾರಿಗಳನ್ನು ಪಂಚರಾಗಿ ಪಡೆದ ಕಾರಣ ಅವರನ್ನು ಪಡೆದಿರುವುದಿಲ್ಲವೆಂದುಹೇಳುತ್ತಾರೆ.ಎಲ್ಲಾ ಸಿಲಿಂಡರಗಳ ಪೋಟೋವನ್ನು ತಗೆದಿದ್ದೀರಾ ಎಂದರೆ ಸಾಕ್ಷಿ ತಗೆದಿದ್ದು ನಾವು ಅದರ ಮುಂದೆ ಇದ್ದ ಕಾರಣ ಕಾಣಿಸಿರುವುದಿಲ್ಲವೆಂದು ಹೇಳುತ್ತಾರೆ. ಎಲ್ಲಾ ವಸ್ತುಗಳ ಪೋಟೋ ತಗೆಯಲು ತೊಂದರೆ ಇರಲಿಲ್ಲವೆಂದರೆ ಸಾಕ್ಷಿ ಮನೆಯಲ್ಲಿ ಬೆಳಕು ಇಲ್ಲದೇ ಇರುವ ಕಾರಣ ತಗೆದಿರುವುದಿಲ್ಲವೆಂದು ಹೇಳುತ್ತಾರೆ.

Electranic Scale ಯಾವ ಕಂಪನಿದ್ದು ಎಂದು ಮಹಜರನಲ್ಲಿ ನಮೂದು ಮಾಡಿರುತ್ತೇವೆ. ಮು. ಮಾ. ಗಳ ಮೇಲೆ ಸನ್ ಬ್ರಾಂಡ ಕಂಪನಿಯ ಹೆಸರು ಇದ್ದು ಅದನ್ನು ಮಹಜರನಲ್ಲಿ ನಮೂದು ಮಾಡಿಲ್ಲವೆಂದರೆ ಸರಿಯಲ್ಲ. ಮು. ಮಾ. ಗಳ ವಿಶೇಷ ಗುರುತನ್ನು ಹಾಕಿ ಪಂಚರ ಸಹಿ ಪಡೆದಿರುವುದಿಲ್ಲ.ಎಫ್.ಐ.ಆರ್ ಪ್ರಕಾರ ಠಾಣೆಯಿಂದ 14 ಕೀ ಮೀ ದೂರದಲ್ಲಿದೇ ಎಂದರೆ ಸಾಕ್ಷಿ ಅಂದಾಜಿನ ಮೇರೆಗೆ ಬರೆದಿದ್ದೇವೆಂದು ಹೇಳುತ್ತಾರೆ. ಸ್ಕೇಚ್ ನಲ್ಲಿ ಕಿಡಕಿ ಪಶ್ಚಿಮ ದಿಕ್ಕಿಗೆ ಇರುತ್ತದೆ. ಸ್ಕೇಚ್ ನ ಪ್ರಕಾರ ಮನೆಯ ಹಿಂಬಾಗಕ್ಕೆ ಯಾವುದೇ ಕಿಡಕಿ ಇರಲಿಲ್ಲ.

ಚಾಸಾ 1 ಅವರು ನೀಡಿರುವ ದೂರಿನಲ್ಲಿ ಮನೆಯ ಹಿಂಬಾಗ ಕಿಡಕಿಯ ಬಗ್ಗೆ

ನಮೂದು ಇರುತ್ತದೆ ಎಂದರೆ ಸಾಕ್ಷಿ ಪಕ್ಕದಲ್ಲಿ ಶೆಡ್ಡ ಇದ್ದು ಅದರ ಮೂಲಕ ಬಂದಿರುತ್ತಾರೆಂದು ಹೇಳುತ್ತಾರೆ. ಮಹಜರನಲ್ಲಿ ಪಶ್ಚಿಮಕ್ಕೆ ಖಾಲಿ ಜಾಗ ಇರುವ ಬಗ್ಗೆ ನಮೂದು ಇಲ್ಲವೆಂದರೆ ಸರಿ.

ಆರೋಪಿಯ ಹೇಳಿಕೆ ಮೇರೆಗೆ ಚಕ್ಕುಬಂದಿ ನಮೂದು ಮಾಡಿರುತ್ತೇನೆ. ಸದರಿ ವಿಚಾರವನ್ನು ಮಹಜರನಲ್ಲಿ ನಮೂದು ಮಾಡಿರುವುದಿಲ್ಲ. ಮಹಜರನ್ನು ಹೊರತು ಪಡಿಸಿ ಸ್ಥಳದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಿ.ಪಿ 7 ರಲ್ಲಿ 17.01 ಎಂದು ನಮೂದು ಇದೆ ಎಂದರೆ ಸರಿ. ಸಾಮಾನ್ಯವಾಗಿ ದಿನಾಂಕವನ್ನು ಬರೆಯುವಾಗ ದಿನಾಂಕ ತಿಂಗಳು ಮತ್ತು ವರ್ಷ ಬರೆಯುತ್ತೇವೆ ಎಂದರೆ ಸರಿ. ನಾನು ಪಿ.ಡಿ.ಓ ಅವರಿಗೆ ನೋಟಿಸ್ ಮಾಡಿರುತ್ತೇನೆ. ನಾನು ನೋಟಿಸ್ ನೀಡಿದ ದಿನವೇ ಪಿ.ಡಿ.ಓ ಅವರು ವರದಿಯನ್ನು ನೀಡಿರುತ್ತಾರೆ.

ಪಿ.ಡಿ.ಓ ಅವರೇ ಕಚೇರಿಗೆ ದಾಖಲೆ ತಂದು ನೀಡಿರುತ್ತಾರೆ. ಸದರಿ ದಾಖಲೆಯನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ಪಿ.ಡಿ.ಓ ಅವರು ನಿವೇಶಣದ ದಾಖಲೆ ನೀಡಿರುತ್ತಾರೆ. ಖಾತಾ ಎಕ್ಸಟ್ರಾಕ್ಟನಲ್ಲಿ ನಿವೇಶನದ ಬಗ್ಗೆ ನಮೂದು ಇರುವುದಿಲ್ಲ. ಈ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಪಿ.ಡಿ.ಓ ಅವರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲವೆಂದರೆ ಸಾಕ್ಷಿ ಯಾರು ಸಹಿ ಮಾಡಿದ್ದಾರೋ ಅವರನ್ನೇ ಸಾಕ್ಷಿದಾರರನ್ನಾಗಿ ಮಾಡಿರುತ್ತೇವೆ. ಪಿ.ಡಿ.ಓ ಅವರ ಪರವಾಗಿ ದಾಖಲೆ ನೀಡುತ್ತಿದ್ದೇನೆಂದು ಅವರ ಹೇಳಿಕೆ ಪಡೆದಿರುವುದಿಲ್ಲ.

ನಾನು ಸ್ಥಳದಲ್ಲಿ ಯಾವುದೇ ಮಹಜರ ಮಾಡಿಲ್ಲ ವಸ್ತುಗಳನ್ನು ಜಪ್ತು ಮಾಡಿಲ್ಲ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗದೇ ಇರುವ ಕಾರಣ ತಪ್ಪಾಗಿ ಚಕ್ಕುಬಂದಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರನಲ್ಲಿ ಹೊತ್ತಾತ್ತೊಗಿ ಮನೆಗಳು ಇರುವ ಬಗ್ಗೆ ಹೇಳಿದ್ದು ಚಕ್ಕುಬಂದಿಯಲ್ಲಿ ಈ ಬಗ್ಗೆ ವಿವರಣೆ ಇರುವುದಿಲ್ಲವೆಂದರೆ ಸರಿ.

ಪಿ.ಎಫ್ ನಲ್ಲಿ ಕೆಲವೊಂದು ವಸ್ತುಗಳನ್ನು ಕೈಯಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿ ಬಿಟ್ಟು ಹೋಗಿರುತ್ತವೆಂದು ಹೇಳುತ್ತಾರೆ. ಈ ಪ್ರಕರಣಗೊಸ್ಕರ ಮು. ಮಾ. ಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಅವುಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪಂಚರನ್ನು ಸ್ದಳಕ್ಕೆ ಕರೆಸಿರುವುದಿಲ್ಲ ಠಾಣೆಯಲ್ಲಿ ಅವರ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. 19 ಸಿಲಿಂಡರಗಳು ತೋರಿಸುವ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.